(21) ಕರ್ನಾಟಕ ಪ್ರದೇಶ ಕುರುಬರ ಸಂಘದ ಕಾಗಿನೆಲೆ ಸಂಸ್ಥಾನ ಪೀಠ, ಹಾವೇರಿ.

ಮೇಲ್ಕಂಡ ಅರ್ಜಿಗಳು ಈಗಾಗಲೇ ಶಿಫಾರಸ್ಸು ಮಾಡಿರುವ 15 ಕಾಲೇಜುಗಳ ಅರ್ಜಿಗಳನ್ನು ಒಳಗೊಂಡಿರುವುದಿಲ್ಲ.

ಇ) ಪ್ರೋ : ಎಂ.ಐ. ಸವದತ್ತಿ ನೇತೃತ್ವದ ತಜ್ಞರ ಸಮಿತಿಯ ಶಿಫಾರಸ್ಸನ್ನು ಆಧರಿಸಿ ತಾಂತ್ರಿಕ ಶಿಕ್ಷಣ ನಿರ್ದೇಶಕರು ನೀಡಿದ ವರದಿಯನ್ನು ಪರಿಗಣಿಸಿ ನೂತನ ಇಂಜಿನಿಯರಿಂಗ್ ಕಾಲೇಜುಗಳ ಸ್ಥಾಪನೆಗೆ ಅನುಮೋದನೆಗೆ ಎಐಸಿಟಿಇ ಗೆ ಶಿಫಾರಸ್ಸು ಮಾಡಲಾಗಿದೆ.

## ಗುತ್ತಿಗೆ ಆಧಾರದ ಶಿಕ್ಷಕರು ಹಾಗೂ ಉಪನ್ಯಾಸಕರುಗಳ ವೇತನ ಕಡಿತ

1527 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ 1991ರಲ್ಲಿ ಖಾಯಂಗೊಂಡ ಶಿಕ್ಷಕರು ಹಾಗೂ ಉಪನ್ಯಾಸಕರುಗಳ ವಾರ್ಷಿಕ ವೇತನವನ್ನು ಕಡಿತಗೊಳಿಸಿರುವುದು ನಿಜವೇ?*

*ಆ) ಹಾಗಿದ್ದಲ್ಲಿ ಈ ರೀತಿ ಕಡಿತಗೊಳಿಸಲು ಕಾರಣಗಳೇನು?*

*ಇ) ರಾಜ್ಯ ಸರ್ಕಾರ ಈ ರೀತಿ ಮಾನವೀಯ ದೃಷ್ಟಿಯಿಂದ ಇಂತ : ಅವೈಜ್ಞಾನಿಕ ಹಾಗೂ ಅನ್ಯಾಯಯುತವಾದ ಆದೇಶವನ್ನು ಹಿಂತೆಗೆದುಕೊಳ್ಳಲು ಯೋಜಿಸಿದೆಯೇ? ಹಾಗಿದ್ದಲ್ಲಿ ಯಾವಾಗ ಹಿಂತೆಗೆದುಕೊಳ್ಳಲಾಗುವುದು?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು).

ಅ) ಸರ್ಕಾರಿ ಅಧಿಸೂಚನೆ ಸಂಖ್ಯೆ : ಡಿಪಿಎಆರ್ - 12 ಎಸ್ಆರ್ಇ-97 ದಿನಾಂಕ : 9-6-97 ರಲ್ಲಿ 1991ರಲ್ಲಿ ಖಾಯಂಗೊಂಡ ಗುತ್ತಿಗೆ ಆಧಾರದ ಶಿಕ್ಷಕರು ಹಾಗೂ ಉಪನ್ಯಾಸಕರ ಪ್ರಾರಂಭಿಕ ಮೂಲ ವೇತನವನ್ನು ಸದರಿ ನೌಕರರು ವಿಲೀನ ಹೊಂದುವ ಹುದ್ದೆಯ ಕನಿಷ್ಠ ಹಂತಕ್ಕೆ, ಅವರು ವಿಲೀನಗೊಂಡ ದಿನಾಂಕದಿಂದ ನಿಗದಿಪಡಿಸಲು ಸಂಬಂಧಪಟ್ಟ ನಿಯಮಾವಳಿಗಳಿಗೆ ತಿದ್ದುಪಡಿ ಹೊರಡಿಸಲು ಕರಡು ನಿಯಮಾವಳಿಗಳನ್ನು ಹೊರಡಿಸಲಾಗಿದೆ.

ಆ) ಗುತ್ತಿಗೆ ಆಧಾರಿತ ನೌಕರರು ಶಿಕ್ಷಣ ಇಲಾಖೆಯಲ್ಲಿಲ್ಲದೆ ಸರ್ಕಾರದ ವಿವಿಧ ಇಲಾಖೆಗಳಲ್ಲೂ ಇದ್ದು ಅವರುಗಳನ್ನು ಸೇವಾ ಸಕ್ರಮಗೊಳಿಸಲು, ಸರ್ಕಾರವು ಬೇರೆ ಬೇರೆ ಇಲಾಖೆಗಳಲ್ಲಿ ಬೇರೆ ಬೇರೆ ವಿಶೇಷ ನಿಯಮಾವಳಿಗಳನ್ನು ಹೊರಡಿಸಲಾಗಿದ್ದು, ಈ ಎಲ್ಲಾ ನಿಯಮಗಳಿಗೆ ಸಂಬಂಧಿಸಿದಂತೆ ಏಕರೂಪದ ನಿಯಮವನ್ನು ಜಾರಿಗೊಳಿಸುವ ಉದ್ದೇಶದಿಂದ ಈ ರೀತಿ ಕ್ರಮ ಜರುಗಿಸಲಾಗಿದೆ.

ಇ) ದಿನಾಂಕ : 9-6-97 ರಂದು ಹೊರಡಿಸಿರುವ ಈ ಕರಡು ವಿಶೇಷ ತಿದ್ದುಪಡಿ ನಿಯಮಾವಳಿಗಳಿಗೆ ಆಕ್ಷೇಪಣೆಗಳು ಸ್ವೀಕೃತವಾಗಿದ್ದು ಇವು ಪರಿಶೀಲನೆಯಲ್ಲಿವೆ.